ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 6, January-February 2024, Pp. 43-48
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ರಂಗಭೂಮಿಯಲ್ಲಿ ರಂಗಪ್ರಕಾಶ: ಹುಟ್ಟು ಮತ್ತು ಬೆಳವಣಿಗೆ

**ಡಾ. ಪ್ರಭುರಾಜ**
ಅತಿಥಿ ಪ್ರಾಧ್ಯಾಪಕರು, ಪ್ರದರ್ಶನ ಕಲಾ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

***Abstract:***
*ರಂಗಭೂಮಿ ಮೂಲತಃ ಒಂದು ದೃಶ್ಯ ಮಾಧ್ಯಮವಾಗಿರುವುದರಿಂದ ಬೆಳಕಿನ ವ್ಯವಸ್ಥೆಯು ಅನಿವಾರ್ಯವಾಗಿದೆ. ರಂಗಪ್ರಕಾಶ ವ್ಯವಸ್ಥೆಯ ಪ್ರಾಥಮಿಕ ಉದ್ದೇಶ ಕೂಡ ಅದೇ ಆಗಿದೆ. ರಂಗದ ಮೇಲಿನ ಎಲ್ಲಾ ಕ್ರಿಯೆಗಳು ಪ್ರೇಕ್ಷಾಂಗಣದ ಎಲ್ಲಾ ಭಾಗಕ್ಕೂ ಸ್ಪಷ್ಟವಾಗಿ ಕಾಣುವಂತೆ ಮಾಡುವುದು. ಕಾಲಕಾಲಕ್ಕೆ ಈ ರಂಗಪ್ರಕಾಶ ವ್ಯವಸ್ಥೆಯು ಕೇವಲ ರಂಗವನ್ನು ಬೆಳಗಿಸುವ ಕೆಲಸವನ್ನಷ್ಟೇ ಮಾಡದೆ ಪ್ರಯೋಗದ ರಸಪೋಷಣೆಯ ಕೆಲಸಕ್ಕೆ ಹಾಗೂ ನಾಟಕದ ಭಾವ-ಅರ್ಥಗಳ ಸಂವಹನ ಕೆಲಸಕ್ಕೂ ಪ್ರಾಮುಖ್ಯತೆ ನೀಡುತ್ತದೆ. ಹೀಗಾಗಿ ಇದರಲ್ಲಿ ಹಲವು ರೀತಿಯ ವೈವಿಧ್ಯಗಳು ಹುಟ್ಟಿಕೊಂಡಿವೆ. ಪ್ರಸ್ತುತ ಲೇಖನದಲ್ಲಿ ರಂಗಭೂಮಿಯಲ್ಲಿ ರಂಗಪ್ರಕಾಶದ ಹುಟ್ಟು ಮತ್ತು ಬೆಳವಣಿಗೆ ಕುರಿತು ವಿವರಿಸಲಾಗಿದೆ.*

***Keywords:*** *ರಂಗಭೂಮಿ, ನಾಟಕ, ರಂಗಪ್ರಕಾಶ, ದೃಶ್ಯ ಮಾಧ್ಯಮ, ಧ್ವನಿ ಪ್ರತಿಫಲನ.*

## ಪೀಠಿಕೆ

ಆಧುನಿಕ ಪೂರ್ವಕಾಲದಲ್ಲಿ ರಂಗಪ್ರಕಾಶ ವ್ಯವಸ್ಥೆಯು ಸೂರ್ಯನ ಬೆಳಕು, ಎಣ್ಣೆದೀಪ, ದೊಂದಿ(ಪಂಜು) ಮೊಂಬತ್ತಿ, ಲಾಟೀನುಗಳನ್ನು ಬಳಸುವುದರೊಂದಿಗೆ ಸಾಗುತ್ತಿತ್ತು. ಆಧುನಿಕ ಯುಗದಲ್ಲಿ ವಿದ್ಯುತ್ ದೀಪಗಳನ್ನು ಬಳಸಲಾಗುತ್ತಿದೆ, ಅಪಾರ ಸಂಖ್ಯೆಯಲ್ಲಿ ಬೆಳಕಿನ ಸಾಧನಗಳು ಮತ್ತು ಹಲವು ಮಾದರಿಗಳನ್ನು ಕಾಣಬಹುದಾಗಿದೆ. ಈ ವಿದ್ಯುತ್ ದೀಪಗಳ ಆವಿಷ್ಕಾರದ ನಂತರದಲ್ಲಿ ರಂಗಪ್ರಕಾಶ ತಂತ್ರಗಾರಿಕೆ ಪ್ರಮುಖ ಸ್ಥಾನವನ್ನು ಪಡೆದಿದೆ.

ಈ ರೀತಿಯ ಆವಿಷ್ಕಾರಗಳು ರಂಗಭೂಮಿಯಲ್ಲಿ ನಡೆಯುತ್ತಿದ್ದರೂ ರಂಗಭೂಮಿಯ ರಂಗಪ್ರಕಾಶ ಅತ್ಯಾಧುನಿಕತೆಯ ತಂತ್ರಗಳ ಮೇಲೆ ಅವಲಂಬಿಸಿಲ್ಲ. ರಂಗಭೂಮಿಯ ಪ್ರಾಚೀನತೆಯನ್ನು ಅವಲೋಕಿಸಿದರೆ ಅದು ಸಂಪೂರ್ಣವಾಗಿ ಬೆಳಕಿನ ತಂತ್ರಕ್ಕೆ ಅವಲಂಬಿಸಿಲ್ಲವೆಂಬುದನ್ನು ಗಮನಿಸಬೇಕು. ರಂಗಪ್ರಕಾಶವು ಸೂರ್ಯನ ಬೆಳಕಿನಿಂದ ಪ್ರಾರಂಭಿಸಿ, ಅತ್ಯಾಧುನಿಕ ಕಂಪ್ಯೂಟರ್ ಕೃತಕ ಬೆಳಕಿನ ವ್ಯವಸ್ಥೆ ತನಕ ಹರಡಿಕೊಂಡಿರುವುದನ್ನು ನಾವು ಕಾಣಬಹುದು.

## ಆಧುನಿಕಪೂರ್ವ ರಂಗಭೂಮಿಯಲ್ಲಿ ರಂಗಪ್ರಕಾಶ ವ್ಯವಸ್ಥೆ

ರಂಗಭೂಮಿಯು ಒಂದು ಸಂಘಟಿತ ಕಲಾಮಾಧ್ಯಮವಾಗದೇ ಇದ್ದಂತಹ ಸಂದರ್ಭಗಳಲ್ಲಿ ಬಹುಪಾಲು ರಂಗಪ್ರದರ್ಶನಗಳಿಗೆ ಒದಗಿ ಬಂದ ಬೆಳಕಿನ ವ್ಯವಸ್ಥೆಗಳು ಎಂದರೆ ಸೂರ್ಯನ ಬೆಳಕು, ಎಣ್ಣೆದೀಪ ಮತ್ತು ಪಂಜು ದೀಪಗಳು. ಈ ಬೆಳಕಿನ ವ್ಯವಸ್ಥೆಗಳು ರಂಗಭೂಮಿಗಳಲ್ಲಿ ಅಷ್ಟೇ ಗುಣಾತ್ಮಕ

***Please cite this article as:*** ಪ್ರಭುರಾಜ. (2024). ರಂಗಭೂಮಿಯಲ್ಲಿ ರಂಗಪ್ರಕಾಶ: ಹುಟ್ಟು ಮತ್ತು ಬೆಳವಣಿಗೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 2(6), 43–48.

'ಮಾಂತ್ರಿಕ' ಆವರಣವನ್ನು ಒದಗಿಸಿಕೊಡುತ್ತಿದ್ದವು. ಒಂದು ರಂಗ ಆಚರಣೆಯು ಯಾವ ಹೊತ್ತಿನಲ್ಲಿ ನಡೆಯಬೇಕು ಎಂಬ ನಿರ್ಧಾರವು ಮೂಲತಃ ಅದರ ಬೆಳಕಿನವ್ಯವಸ್ಥೆಯ ಸ್ವರೂಪವನ್ನು ಅವಲಂಬಿಸಿರುತ್ತದೆ. ಕೆಲವು ಆಚರಣೆಗಳು ಎಳೆ ಬೆಳಕಿನಲ್ಲಿ ನಡೆದರೆ ಕೆಲವು ಆಚರಣೆಗಳು ಉರಿ ಬಿಸಿಲಿನಲ್ಲಿ ಮತ್ತೆ ಕೆಲವು ಸಂಜೆಯ ವೇಳೆಯಲ್ಲಿ ನಡೆಯುತ್ತಿದ್ದವು.

ಪಂಜು ಮತ್ತು ಎಣ್ಣೆ ದೀಪಗಳನ್ನು ಬಳಸುವಾಗ ಹಲವು ವೈವಿಧ್ಯಗಳು ಸೃಷ್ಟಿಯಾಗುವುದನ್ನು ನಾವು ಕಾಣಬಹುದಾಗಿದೆ. ಉದಾಹರಣೆಗೆ: ಬಯಲಾಟದ ಪ್ರದರ್ಶನಗಳಲ್ಲಿ ನರಸಿಂಹನ ಪಾತ್ರಧಾರಿ ದೋಂದಿಗಳನ್ನು ಹಿಡಿದು ಪ್ರವೇಶಿಸಿದಾಗ ಅದರ ಬೆಳಕಿನ ವೈವಿಧ್ಯತೆಯ ಕಾಲಾತ್ಮಕತೆಯನ್ನು ನೋಡಲು ಸೊಗಸಾಗಿರುತ್ತದೆ. ಬೇರೆಬೇರೆ ದೇಶಗಳಲ್ಲಿ ರಂಗಭೂಮಿಯು ಸಂಘಟಿತವಾಗಲು ಮುಂದಾದಾಗ ಮೊದಲು ಒದಗಿಬಂದಿದ್ದು ಸೂರ್ಯನ ಬೆಳಕು ಮತ್ತು ದೋಂದಿ ದೀಪಗಳೇ.

ಗ್ರೀಕ್ ರಂಗಪ್ರಯೋಗಗಳು ಬೆಳಗ್ಗೆ ಆರಂಭವಾಗಿ ಸಂಜೆಗೆ ಮುಗಿಯುತ್ತಿದ್ದವು. ಕಾರಣ ಸೂರ್ಯನ ಬೆಳಕಿನಲ್ಲಾಗುವ ಪರಿವರ್ತನೆಗಳೇ ಆ ನಾಟಕಕ್ಕೆ ಪೂರಕವಾಗಿ ಒದಗಿಬರುತ್ತಿದ್ದವು ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಗ್ರೀಕ್ ರಂಗಪ್ರಯೋಗಗಳಲ್ಲಿ ರಾತ್ರಿಯ ಸಮಯವನ್ನು ತೋರಿಸಲು ನಟರು ಕೈಯಲ್ಲಿ ಉರಿಯುವ ಪಂಜು ಹಿಡದು ಬರುತ್ತಿದ್ದರು.

ರೋಮನ್ ಯುಗದ ವೈವಿಧ್ಯಮಯ ಪ್ರದರ್ಶನಗಳು ಸೂರ್ಯನ ಬೆಳಕನ್ನು ಬಳಸುವುದರ ಜೊತೆಗೆ ರಂಗಮಂದಿರದ ಮಾಡಿಗೆ ತೆಳುಬಣ್ಣಗಳ ಅರೆಪಾರದರ್ಶಕ ಮುಚ್ಚಿಗೆಗಳನ್ನು ಹಾಕಿ ವಿಶೇಷ ಪರಿಣಾಮಗಳನ್ನು ಸೃಷ್ಟಿಸುತ್ತಿದ್ದವೆಂದು ತಿಳಿದು ಬರುತ್ತದೆ.

ಕೆಲ ಚಕ್ರವರ್ತಿಗಳು ಮೋಜಿಗಾಗಿ ರಂಗ ಮಂದಿರಗಳಲ್ಲಿ ಅಸಂಖ್ಯೆ ಕಿರುದೀಪಗಳನ್ನು ಉರಿಸಿ ಸಂಜೆಯ ಹೊತ್ತಿಗೆ ದೀಪಗಳ ದೃಶ್ಯವೈಭವವನ್ನೇ ಸೃಷ್ಟಿಸುತ್ತಿದ್ದ ದಾಖಲೆಗಳನ್ನು ನಾವು ನೋಡ ಬಹುದಾಗಿದೆ.

ಮಧ್ಯಯುಗದ ರಂಗಭೂಮಿ ಹಾಗೂ ಎಲಿಜಬೆತ್‌ನ ರಂಗಭೂಮಿ ಕೂಡಾ ಪ್ರಾಥಮಿಕವಾಗಿ ಸೂರ್ಯನ ಬೆಳಕನ್ನೆ ಆಧರಿಸಿ ಸಂಜೆಯಾಗುತ್ತ ಹೋದಂತೆ ದೋಂದಿ–ಸಿಡಿಮದ್ದುಗಳನ್ನು ಉಪಯೋಗಿಸುವ ಮೂಲಕ ರಂಗಭೂಮಿಯಲ್ಲಿ ವಿಶಿಷ್ಟ ಪರಿಣಾಮಗಳನ್ನು ಸೃಷ್ಟಿಸಲಾಗುತ್ತಿತ್ತೆಂದು ಉಲ್ಲೇಖಗಳಿವೆ. ಈ ಕಾಲದ ರಂಗಪ್ರಯೋಗದಲ್ಲಿ ವಿಶಾಲವಾದ ರಂಗಸ್ಥಳವಿದ್ದು ಅದರ ಒಂದು ತುದಿಯಲ್ಲಿ ಉರಿಯುತ್ತಿದ್ದ ಭಾರೀ ಬೆಂಕಿಯ ವಿಶೇಷ ರಂಗಪರಿಣಾಮಗಳನ್ನು ಸೃಷ್ಟಿಸುತ್ತಿತ್ತೆಂದೂ ಕೆಲವು ಉಲ್ಲೇಖಗಳು ತಿಳಿಸಿವೆ.

ಷೇಕ್ಸ್‌ಪಿಯರ್‌ನ ನಾಟಕಗಳನ್ನು ನಾವು ನೋಡಿದಾಗ ಇವು ಸಹ ಮಟ–ಮಟ ಮಧ್ಯಾಹ್ನ ಸುಡುಬಿಸಿಲಿನಲ್ಲಿ ನಡೆಯುತ್ತಿದ್ದರೂ ಪಾತ್ರವೂ ಮೇಣದ ಬತ್ತಿಯನ್ನು ಕೈಯಲ್ಲಿ ಹಿಡಿದು ಬಂದರೆ ಅದು ರಾತ್ರಿಯ ಸಮಯ ಎಂದು ಪ್ರೇಕ್ಷಕರು ಕಲ್ಪಿಸಿಕೊಳ್ಳಬೇಕಾಗಿತ್ತು.

ಪೂರ್ವದೇಶಗಳ ಆಧುನಿಕಪೂರ್ವ ರಂಗಭೂಮಿ ಗಳಲ್ಲೂ ಸೂರ್ಯನ ಬೆಳಕು ಮತ್ತು ದೀಪಗಳಿಂದ ರಂಗಪ್ರಕಾಶದ ವೈವಿಧ್ಯಗಳನ್ನು ರೂಪಿಸಿರುವುದು ಕಾಣಸಿಗುತ್ತದೆ. ಜಪಾನಿನ ನೋಹ್–ಕಬೂಕಿ ರಂಗಮಂದಿರಗಳಲ್ಲಿ ಸೂರ್ಯನ ಬೆಳಕು ಸರಾಗವಾಗಿ ಒಳಪ್ರವೇಶ ಮಾಡುವ ವಿನ್ಯಾಸವಿರುತ್ತದೆ. ಅಗತ್ಯವಿದ್ದಲ್ಲಿ ಮೋಂಬತ್ತಿ (ಮೇಣದ ಬತ್ತಿ) ಮತ್ತು ದೀವಟಿಗೆಗಳಿಂದ ಪ್ರಕಾಶವನ್ನು ಒದಗಿಸಲಾಗುತ್ತಿತ್ತು.

ಇನ್ನು ನಾಟ್ಯಶಾಸ್ತ್ರವು ನಿರೂಪಿಸುವ ರಂಗಮಂದಿರವು ಸಹ ಒಳಾಂಗಣದಲ್ಲೇ ಇದ್ದರೂ ಸೂರ್ಯನ ಬೆಳಕು ಪ್ರವೇಶಿಸಲು ಅವಕಾಶವಿತ್ತು, ಜೊತೆಗೆ ದೀಪಗಳ ಪ್ರಕಾಶವು ಅಲ್ಲಿ ಬಳಕೆಯಾಗುತ್ತಿದ್ದಿರಬೇಕು ಇದಕ್ಕೆ ಉಲ್ಲೇಖವಾಗಿ ಪೂರ್ವರಂಗದ ಆಚರಣೆಗಳನ್ನು ನೆರವೇರಿಸುವಾಗ

ದೋಂದಿಗಳನ್ನು ಹಚ್ಚುವುದು ಕೂಡ ಒಂದು ಕ್ರಿಯೆಯಾಗಿ ಉಲ್ಲೇಖಿಸುವುದು ಇದಕ್ಕೆ ಸಾಕ್ಷಿ.

ಬಹುತೇಕ ರಾತ್ರಿಯೇ ನಡೆಯುತ್ತಿದ್ದ ಸಾಂಪ್ರದಾಯಕ ರಂಗಭೂಮಿಗಳಲ್ಲಿ ಎಣ್ಣೆದೀಪಗಳ ಬೆಳಕುಅತ್ಯಂತ ಕ್ರಿಯಾಶೀಲವಾಗಿ ಬಳಕೆಯಾಗಿರುವುದು ಇವತ್ತಿನ ಉಳಿದಿರುವ ಪ್ರಕಾರಗಳಲ್ಲಿಯೂ ಕಾಣಬಹುದು. ಉದಾಹರಣೆಗೆ ಕೇರಳದ ಕುಡಿಯಾಟ್ಟಂ ಈ ಪ್ರಕಾರದಲ್ಲಿ ರಂಗಸ್ಥಳದ ಮುಂತುದಿಯಲ್ಲಿ ದೊಡ್ಡ ದೀಪದ ಕಂಬವೊಂದನ್ನು ಇಡಲಾಗಿದ್ದು ಎರಡು ಬತ್ತಿಗಳಲ್ಲಿ ಒಂದು ಬತ್ತಿಯನ್ನು ಪ್ರೇಕ್ಷಾಂಗಣದ ಕಡೆಗೂ ಮತ್ತೊಂದು ರಂಗದ ಕಡೆಗೂ ಬೆಳಗಿಸಲಾಗುತ್ತದೆ. ಇವು ರಂಗವನ್ನು ಬೆಳಗಿಸುವುದರ ಜೊತೆಗೆ ನಟರ ಮತ್ತು ಪ್ರೇಕ್ಷಕರ ಕೇಂದ್ರಬಿಂದುಗಳಾಗಿ ಕೆಲಸ ಮಾಡುತ್ತವೆ. ಇಲ್ಲಿ ದೀಪದ ಕಂಬದತ್ತಲೇ ದೃಷ್ಟಿಯನ್ನು ಕೇಂದ್ರೀಕರಿಸಿ ನೇತ್ರಾಭಿನಯಕ್ಕೆ ವಿಶೇಷ ಪ್ರಾಧಾನ್ಯ ನೀಡಲಾಗಿದೆ.

ಈ ಕಾಲದ ಬೆಳಕಿನ ವ್ಯವಸ್ಥೆಗೆ ಪೂರಕವಾಗಿ ಆಯಾ ಕಾಲದ ರಂಗಮಂದಿರಗಳು ಹಾಗೂ ವೇಷಭೂಷಣಗಳು ರೂಪಿತವಾಗಿರುವುದನ್ನು ಕಾಣಬಹುದಾಗಿದೆ. ಕಥಕ್ಕಳಿಯ ಪಾತ್ರಗಳು ಮುಖ–ಎದೆ ತಲೆಯನ್ನು ಎಷ್ಟು ಸೂಕ್ಷ್ಮವಾಗಿ ಅಲಂಕರಿಸುತ್ತವೆಯೊ ಅಷ್ಟು ಸೂಕ್ಷ್ಮವಾಗಿ ಮೊಣಕಾಲಿನ ಭಾಗಗಳನ್ನು ಅಲಂಕರಿಸುವುದಿಲ್ಲ. ಆದರೆ ಎಣ್ಣೆ ದೀಪಗಳ ಬೆಳಕಿನಲ್ಲಿ ಕಾಣದೇ ಇರುವ ದೋಷಗಳು ವಿದ್ಯುತ್ ದೀಪದ ಬೆಳಕಿನಲ್ಲಿ ಅಸಹ್ಯವಾಗಿ ಕಾಣಿಸುತ್ತವೆ ಎಂಬುದನ್ನು ಸಹ ಮರೆಯಬಾರದು.

**ಆಧುನಿಕ ರಂಗಪ್ರಕಾಶದ ಉಗಮ**

ಆಧುನಿಕ ರಂಗಪ್ರಕಾಶವು ವಿದ್ಯುಚ್ಛಕ್ತಿಯ ಆವಿಷ್ಕಾರದೊಂದಿಗೆ ಆರಂಭವಾಯಿತಾದರೂ ಈ ಪರಿಕಲ್ಪನೆಯು ಯುರೋಪಿನ ನವೋದಯ ರಂಗಭೂಮಿಯ ಸಂದರ್ಭಲ್ಲೇ ಉದಯಗೊಳ್ಳಲು ಪ್ರಾರಂಭವಾಗಿತ್ತು.

**ನವೋದಯ ರಂಗಪ್ರಕಾಶದ ಬೆಳವಣಿಗೆ**

ನವೋದಯ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ ನವಶಾಸ್ತ್ರೀಯ–ನಿಯೋಕ್ಲಾಸಿಕಲ್ ಮೀಮಾಂಸೆಯ ಪ್ರಕಾರ ಕಲೆಯ ಪ್ರಮುಖ ಉದ್ದೇಶ ವೆರಿಸಿಮಿಲಿಟ್ಯೂಡ್ ಅರ್ಥಾತ್ ಸತ್ಯಾಭಾಸದ ಸೃಷ್ಟಿ. ಈ ಪರಿಕಲ್ಪನೆಯ ಪ್ರಕಾರ 'ಆದರ್ಶವಾಸ್ತವ'ವೊಂದನ್ನು ಪರಿಣಾಮಕಾರಿಯಾಗಿ ಪ್ರೇಕ್ಷಕರಿಗೆ ತಲುಪಿಸಬೇಕು. ರಂಗಪ್ರಕಾಶ ವ್ಯವಸ್ಥೆಯು ಸತ್ಯಭಾಸದ ಪರಿಣಾಮಕಾರಿ ಪ್ರಸ್ತುತಿಗೆ ಸಹಾಯಕವೆಂಬ ಕಾರಣದಿಂದಲೇ ರಂಗಪ್ರಕಾಶಕ್ಕೆ ಈ ಕಾಲದಲ್ಲಿ ಮಹತ್ವ ಬಂತಲ್ಲದೇ ಮೂಲ ಕಲ್ಪನೆಗಳು ಈ ಕಾಲದಲ್ಲೇ ಹರಳುಗಟ್ಟಿಕೊಂಡವು.

16ನೇ ಶತಮಾನದ ಕಾಲಕ್ಕೆ ನಾಟಕ ಪ್ರದರ್ಶನಗಳು ಬಯಲಿನಿಂದ ರಂಗಮಂದಿರದ ಕಟ್ಟಡದೊಳಗೆ ಬಂದವು ಆಗ ರಂಗಪ್ರಕಾಶನದ ಶೋಧನೆ ಪ್ರಾರಂಭವಾಯಿತು.

ರಂಗಪ್ರಕಾಶನಕ್ಕೆ ಸಂಬಂಧಿಸಿದಂತೆ ಸಂಶೋಧನೆ ಕೈಗೊಂಡ ಪ್ರಮುಖರೆಂದರೆ ಸೆಬಾಸ್ಟಿಯಾನೋ ಸೆರ್ಲಿಯೋ ಹಾಗೂ ನಿಕೋಲೋ ಸಬಾಟ್ಟಿನಿ. ಸೆಬಾಸ್ಟಿಯಾನೋ ಸೆರ್ಲಿಯೋ 16ನೇ ಶತಮಾನದಲ್ಲಿ ರಂಗಪ್ರಕಾಶನದ ಸಾಧ್ಯತೆಗಾಗಿ ಶೋಧನೆ ಪ್ರಾರಂಭ ಮಾಡಿದವರಲ್ಲಿ ಪ್ರಮುಖರು. ರಂಗಮಂದಿರಗಳ ವಾಸ್ತು ವಿನ್ಯಾಸದ ಬಗ್ಗೆ ವಿಶೇಷವಾಗಿ ಬರೆದಿರುವ ಸೆರ್ಲಿಯೋ ರಂಗಪ್ರಕಾಶದ ಬಗ್ಗೆ ಹಲವು ಸಂಗತಿಗಳನ್ನು ಸೂಚಿಸಿದ್ದಾರೆ. ರಂಗಸ್ಥಳವನ್ನು ಮೂರು ಪ್ರಮುಖ ವಿಧಾನಗಳಲ್ಲಿ ಬೆಳಗಿಸಬೇಕೆಂದು ಸಲಹೆ ಮಾಡುತ್ತಾನೆ. ಅವುಗಳೆಂದರೆ ಸಾಧಾರಣ ಪ್ರಕಾಶನ, ಅಲಂಕಾರಿಕ ದೀಪಗಳು ಮತ್ತು ಚಲಿಸುವ ದೀಪಗಳು. ಈ ಕಲ್ಪನೆ ಆಧುನಿಕ ರಂಗಪ್ರಕಾಶದಲ್ಲೂ ಉಳಿದುಕೊಂಡು ಬಂದಿದೆ ಎಂಬುದನ್ನು ನಾವು ಗ್ರಹಿಸಬೇಕಿದೆ.

ಸೆಬಾಸ್ಟಿಯಾನೋ ಸೆರ್ಲಿಯೋ ಸ್ಪಾಟ್ ದೀಪದ ಮೂಲರೂಪವನ್ನು ಹೀಗೆ ವರ್ಣಿಸಿದ್ದಾನೆ. ಒಂದು ಕ್ಯಾಂಡಲ್‌ನ ಎದುರಿಗೆ ನೀರು ತುಂಬಿದ ದುಂಡನೆಯ

ಗಾಜಿನ ಪಾತ್ರೆಯನ್ನಿಟ್ಟು ಕ್ಯಾಂಡಲಿನ ಹಿಂಬದಿಗೆ ಒಂದು ಬೋಗುಣಿಯನ್ನು ಪ್ರತಿಫಲನಕ್ಕಾಗಿ ಕೂರಿಸಿದರೆ ಕೇಂದ್ರೀಕೃತ ಬೆಳಕಿನಧಾರೆ ಸಾಧ್ಯವಾಗುತ್ತದೆ ಎಂದು ಅವರ ಬರಹದಲ್ಲಿ ಸೂಚಿತವಾಗಿದೆ. ಇಂದಿನ ಸ್ಪಾಟ್ ದೀಪಗಳ ಬಲ್ಬು-ಲೆನ್ಸ್-ರಿಫ್ಲೆಕ್ಟರುಗಳ ಮೂಲರೂಪವೇ ಇದಾಗಿದೆ. ಗಾಜಿನ ಪಾತ್ರೆಯ ನೀರಿಗೆ ಬಣ್ಣವನ್ನು ಬೆರೆಸಿದರೆ ಬಣ್ಣದ ದೀಪಗಳು ಒದಗಿಬರುತ್ತವೆ ಎಂದು ಆತ ಹೇಳುತ್ತಾನೆ.

ನಿಕೋಲೋ ಸಬಾಟ್ಟಿನಿ (1574–1654) ರಂಗಪ್ರಕಾಶದ ಶೋಧನೆ ಕೈಗೊಂಡು ಅದರ ಮೂಲರೂಪಗಳನ್ನು ಬೆಳಕಿನ ನಿಯಂತ್ರಣದ ಪ್ರಾಥಮಿಕ ಉಪಕರಣಗಳನ್ನು ಆವಿಷ್ಕರಿಸಿದ. ಇವರ ಪ್ರಕಾರ ರಂಗಪ್ರಕಾಶ ವ್ಯವಸ್ಥೆಯ ವಿಧಾನಗಳೆಂದರೆ ರಂಗದ ಮುಂತುದಿಗೆ ನೆಲದಲ್ಲಿ ಸಾಲುದೀಪಗಳು, ಮೇಲಿನಿಂದ ತೂಗುಬಿಡುವ ದೀಪಗಳು ಹಾಗೂ ವಿಂಗುಗಳಲ್ಲಿಡಬಹುದಾದ ದೀಪಗಳು

ಈ ಮೂರರ ಸಂಯೋಜನೆಯೇ ಇವನ ರಂಗಪ್ರಕಾಶದ ತಿರುಳು. ಇವೇ ಮುಂದೆ ಪುಟ್‌ಲೈಟ್ಸ್, ಟಾಪ್‌ಲೈಟ್ಸ್ ಎಂಬ ಹೆಸರಲ್ಲಿ ಪ್ರಸಿದ್ಧಿಯಾಗಿದೆ. ನಾವು ಈಗಿನ ಕಾಲದಲ್ಲಿ ಡಿಮ್ಮರ್ ಎಂದು ಕರೆಯುವ ನಿಯಂತ್ರಣ ಉಪಕರಣದ ರೂಪವೊಂದನ್ನು ಸಬಾಟ್ಟಿನಿ ಶೋಧಿಸಿದ್ದಾರೆ. "ಒಂದು ಕ್ಯಾಂಡ್‌ಲಿನ ಮೇಲೆ ದಾರದಿಂದ ಇಳಿಸಬಹುದಾದ ಕೊಳವೆಬಾವಿಯೊಂದನ್ನು ಇರಿಸಿ ಬೆಳಕನ್ನು ಅಗತ್ಯವಿದ್ದಷ್ಟು ಪ್ರಖರತೆಗೆ ಇಳಿಸುವ ಉಪಾಯವನ್ನು ಆತ ಸೂಚಿಸಿಕೊಟ್ಟ. ಈ ಆವಿಷ್ಕಾರಗಳಿಗೆ ಮುಂದೆ ಯುರೋಪಿನ ರಂಗಪ್ರಯೋಗಗಳಲ್ಲಿ ಉಪಯೋಗವಾಗಿ ಜನಪ್ರಿಯವಾದವು.

### 17ನೇ ಶತಮಾನದಲ್ಲಿ ರಂಗಪ್ರಕಾಶ

17ನೇ ಶತಮಾನದಲ್ಲಿ ಶೋಧನೆ ಕೈಗೊಂಡವನು ಇಂಗ್ಲೆಂಡ್‌ನ ಇನಿಗೋಜೋನ್ಸ್ ಎಂಬಾತ ಸರ್ಲಿಯೋನ ಉಪಾಯಗಳನ್ನು ಪಾಲಿಸಿದ. ಆದರೂ ರಂಗಪ್ರಕಾಶ ಹಿನ್ನೆಲೆಯ ದೃಶ್ಯ ಪರಿಕರಗಳನ್ನು ತೋರಿಸುವ ಒಂದು ಸಾಧನವಾಗಿತ್ತಷ್ಟೆ. ಆಗ ಉಪಯೋಗಿಸುತ್ತಿದ್ದ ಬೆಳಕಿನ ಮಾಧ್ಯಮಗಳು ಎಂದರೆ ಎಣ್ಣೆದೀಪ ಮತ್ತು ಮೇಣದ ದೀಪ. ಈ ದೀಪಗಳು ರಂಗಸ್ಥಳವನ್ನು ಮಾತ್ರವಲ್ಲ ಪ್ರೇಕ್ಷಾಂಗಣವನ್ನು ಪ್ರಕಾಶಗೋಳಿಸುತ್ತಿದ್ದವು.

ನವೋದಯ ತಂತ್ರಜ್ಞರ ವಿವಿಧ ದೃಶ್ಯ ಪರಿಣಾಮಗಳೆಂದರೆ ಕೇಂದ್ರೀಕೃತ ಬೆಳಕು, ಬಣ್ಣದ ಬೆಳಕು, ಪ್ರೇಕ್ಷಾಂಗಣದ ರಂಗಸ್ಥಳಗಳನ್ನು ಬೆಳಕಾಗಿಸುವುದು, ಪ್ರದರ್ಶನ ಉತ್ತುಂಗದಲ್ಲಿ ದೀಪಗಳನ್ನು ಆರಿಸಿ ಮಂದ ಪ್ರಕಾಶದಲ್ಲಿಡುವ ತಂತ್ರ ಮತ್ತು ದೃಷ್ಟಿ ದೂರದ ಪರಿಣಾಮ ಕಾಣುವಂತೆ ಬೇರೆ ಬೇರೆ ಸ್ಥಳಗಳಲ್ಲಿ ದೀಪಗಳನ್ನಿಡುವ ವ್ಯವಸ್ಥೆ ಮುಂತಾದವು.

### 18ನೇ ಮತ್ತು 19ನೇ ಶತಮಾನದಲ್ಲಿ ಬೆಳಕಿನ ವ್ಯವಸ್ಥೆ:

18ನೇ ಶತಮಾನದಲ್ಲಿ ರಂಗದೀಪಗಳ ಉಪಕರಣಗಳನ್ನು ಪ್ರೇಕ್ಷಕರ ದೃಷ್ಟಿಯಿಂದ ಮರೆಮಾಡುವ ಪ್ರಯತ್ನ ನಡೆಯಿತು ಇದರ ಫಲಶ್ರುತಿಯಾಗಿ ಪುಟ್‌ಲೈಟ್, ಬಾರ್ಡರ್‌ಲೈಟ್ ಮತ್ತು ಸ್ಟ್ರಿಪ್‌ಲೈಟ್‌ಗಳು ಬಳಕೆಗೆ ಬಂದವು. ಈ ಅವಧಿಯಲ್ಲಿ ಮೂಲ ಕಲ್ಪನೆಗಳು ಸುಧಾರಿಸುತ್ತ ಹೋದವು 1803ರಲ್ಲಿ ಲಂಡನ್ನಿನ ರಂಗಮಂದಿರವೊಂದು ಮೊದಲಿಗೆ ಗ್ಯಾಸ್ ದೀಪಗಳನ್ನು ಬಳಸಿ ತೋರಿಸಿತು ಈ ದೀಪಗಳ ವಿಶೇಷತೆಗಳೆಂದರೆ ಹೆಚ್ಚು ಪ್ರಖರತೆ ಹಾಗೂ ಗ್ಯಾಸಿನ ಪ್ರಮಾಣ ನಿಂತ್ರಿಸುವ ಮೂಲಕ ಬೆಳಕಿನ ಪ್ರಖರತೆಯ ನಿಯಂತ್ರಣ. ಈ ವಿಧದ ಬೆಳಕಿನ ವ್ಯವಸ್ಥೆ ಯೂರೋಪಿನ ಹಲವು ರಂಗ ಮಂದಿರಗಳಲ್ಲಿ ಅಭಿವೃದ್ಧಿಗೊಂಡವು. ಮುಂದೆ 1826 ರಲ್ಲಿ ಲೈಮ್‌ಲೈಟ್ ಬಂತು ಇದರಲ್ಲಿ ಬೆಂಕಿಯ ಅಪಾಯ ಕಡಿಮೆಯಾಯಿತು ಹಾಗು ಗ್ಯಾಸ್ ದೀಪಗಳಿಗಿಂತ ಹೆಚ್ಚು ಪ್ರಖರವಾಗಿತ್ತು.

19ನೇ ಶತಮಾನದಲ್ಲಿ ಅನಿಲ ಬೆಳಕಿನ ಆವಿಷ್ಕಾರವಾಗಿ ರಂಗಪ್ರಕಾಶದ ಬಳಕೆ ಆಗಲೇ

ಪ್ರಾರಂಭವಾದದ್ದು. ಅನಿಲ ಸರಬರಾಜಾಗುವ ಮಾರ್ಗದಲ್ಲಿ ಒಂದು ಕವಾಟ ಅಳವಡಿಸಿ ಅನಿಲ ಪ್ರವಾಹದ ಪ್ರಮಾಣವನ್ನು ನಿಯಂತ್ರಿಸಿ ಲೈಟ್‌ನಿಂದ ಹೊರಹೊಮ್ಮುವ ಬೆಳಕಿನ ಪ್ರಕಾಶವನ್ನು ಹೆಚ್ಚು ಅಥವಾ ಕಡಿಮೆ ಮಾಡುವ ಸಾಧ್ಯವಾಯಿತಲ್ಲದೇ ಪ್ರದರ್ಶನ ಪ್ರಾರಂಭವಾದಾಗ ಪ್ರೇಕ್ಷಾಂಗಣದ ದೀಪ ಆರಿಸಿ ಕತ್ತಲು ಮಾಡಬಹುದಾಗಿತ್ತು. ಇಲ್ಲಿ ಗ್ಯಾಸ್ ಟೇಬಲ್ ಎಂಬ ನಿಯಂತ್ರಣ ಕೇಂದ್ರವಿತ್ತು. ಕವಾಟಗಳನ್ನು ನಿಯಂತ್ರಿಸಲು ಒಬ್ಬ ಚಾಲಕನಿರುತ್ತಿದ್ದ ಈ ಆವಿಷ್ಕಾರದಿಂದ ಮೊದಲ ಬಾರಿಗೆ ವರ್ಣಮಯ ಪ್ರಕಾಶವನ್ನು ರಂಗದ ಮೇಲೆ ಹರಡುವುದು ಸಾಧ್ಯವಾಯಿತು. 1896ರಲ್ಲಿ ಸ್ಥಾಪಿತವಾದ ಅಮೇರಿಕಾದ ಕ್ಲೀಗೆಲ್ ಬ್ರದರ್ಸ್ ಎಂಬ ಕಂಪನಿಯು ಈ ಒಂದು ಪ್ರಕಾರದ ರಂಗಪ್ರಕಾಶ ವ್ಯವಸ್ಥೆಯಲ್ಲಿ ಮುಂಚೂಣಿಯಲ್ಲಿತ್ತು.

20ನೇ ಶತಮಾನದ ಆರಂಭದ ಹೊತ್ತಿಗೆ ಎಲ್ಲಾ ತಾಂತ್ರಿಕ ಬೆಳವಣಿಗೆಗಳು ರಂಗವನ್ನು ಪ್ರಖರವಾಗಿ ಬೆಳಗಿಸುವ ನಿಯಂತ್ರಿಸುವ ಬಣ್ಣ ಬೆಳಕುಗಳ ಚಮತ್ಕಾರಗಳನ್ನು ಮಾಡುವ ಬೆಳಕಿನ ವ್ಯವಸ್ಥೆಯನ್ನು ರೂಪಿಸಿದವು. ಆದರೆ ಕವಲೊಡೆದುಕೊಂಡ ರಂಗಪ್ರಯೋಗಗಳಿಗೆ ಇಷ್ಟೆ ಸಾಕಾಗಲಿಲ್ಲ ರಂಗಸಜ್ಜಿಕೆ ಮತ್ತು ನಟರ ಉದ್ದೇಶವನ್ನು ತೋರಿಸುವ ನೆರಳು ಬೆಳಕಿನ ಗಾಢ ಪ್ರತಿಮೆಗಳನ್ನು ಸೃಷ್ಟಿಸುವ ಪ್ರಕಾಶ ವ್ಯವಸ್ಥೆ ಆ ಕಾಲಕ್ಕೆ ಬೇಕಾಗಿತ್ತು ಅಂತಹ ಶೋಧನೆಗಳನ್ನು ತಾತ್ವಿಕ ನೆಲೆಯಲ್ಲಿ ಮಾಡಿ ತೋರಿಸಿದವರು ಸ್ವಿಟ್ಜರ್ಲ್ಯಾಂಡಿನ ಅಡ್ಲ್ಫ್ ಅಪ್ಪಿಯಾ (1862–1928) ಇಂಗ್ಲೆಡ್‌ನ ಗೋರ್ಡೋನ್ ಕ್ರೇಗ್ (1879–1966) ಇವರ ವಿನ್ಯಾಸಗಳ ಪ್ರೇರಣೆಯಿಂದ ಮುಂದಿನ ರಂಗಕರ್ಮಿಗಳು ಹೊಸ ಮಾದರಿಯ ರಂಗಪ್ರಕಾಶ ವ್ಯವಸ್ಥೆಯನ್ನು ರೂಪಿಸಿ ಬಳಸಿದರು.

ಈ ಕಾಲಕ್ಕೆ ರಂಗವನ್ನು ಬರೀ ಪುಟ್‌ಲೈಟ್‌ಗಳಿಂದ ಮಾತ್ರ ಪ್ರಖರವಾಗಿ ಬೆಳಗಿಸುವ ಪದ್ಧತಿಯನ್ನು ಕೈಬಿಟ್ಟು ಪ್ರತಿಯೊಂದು ರಂಗದ ಭಾಗವನ್ನು ಕನಿಷ್ಠ ಮೂರು ದೀಪಗಳಿಂದ ಬೆಳಗಿಸುವ ವಿಧಾನವನ್ನು ಬಳಸಲಾಯಿತು. ವಿಭಿನ್ನ ಭಾಗಗಳನ್ನು ಪ್ರತ್ಯೇಕವಾಗಿ ಬೆಳಗಿಸಿ ಒಟ್ಟುಗೂಡಿಸಿದಾಗ ಅದರ ರಂಗಪ್ರಕಾಶ ವ್ಯವಸ್ಥೆ ರೂಪುಗೊಳ್ಳುತ್ತದೆ. ಇಂದಿಗೂ ರಂಗಪ್ರಕಾಶ ವ್ಯವಸ್ಥೆಯೂ ಇದೇ ಸೂತ್ರವನ್ನು ಮುಂದುವರಿಸಿಕೊಂಡು ಬಂದಿದೆ. ಜೊತೆಗೆ ಆ ಕಾಲದ ಹೊಸ ಪ್ರಕಾಶ ವ್ಯವಸ್ಥೆ ಬೆಳಕಿನ ನಿಯಂತ್ರಣ ಮತ್ತು ಸಮನ್ವಯದ ಬಗ್ಗೆಯು ಒತ್ತುಕೊಟ್ಟಿದೆ.

20ನೇ ಶತಮಾನದಲ್ಲಿ ಬೆಳವಣಿಗೆ ಹೊಂದಿದ ಈ ಪ್ರಯೋಗಗಳು ರಂಗಪ್ರಕಾಶ ವ್ಯವಸ್ಥೆಗೆ ಒಂದು ಆಧುನಿಕ ವ್ಯಾಕರಣವನ್ನು ನಿರ್ಮಿಸಿದಲ್ಲದೆ ಈ ಕೆಲಸವನ್ನು ಮಾಡಲು ತಂತ್ರಜ್ಞ ಕಲಾವಿದರುಗಳ ಅಗತ್ಯವಾಗುವ ಹಾಗೆ ಮಾಡಿದವು. ಇಲ್ಲಿಂದ ಮುಂದೆ ರಂಗಪ್ರಕಾಶ ವ್ಯವಸ್ಥೆಯಲ್ಲಿ ಆಗಿರುವುದು ತಾಂತ್ರಿಕ ಪರಿಷ್ಕರಣೆಗಳು ಮಾತ್ರ. ಶತಮಾನದ ಆರಂಭದಲ್ಲಿ ಬಂದ ಆಟೋಟ್ರಾನ್ಸ್‌ಫಾರ್ಮರ್ ಡಿಮ್ಮರ್‌ಗಳು ಈಗ ಎಲೆಕ್ಟ್ರಾನಿಕ್ ಡಿಮ್ಮರ್‌ಗಳಾಗಿ ಬದಲಾಯಿಸಿಕೊಂಡಿವೆ.

**ಉಪಸಂಹಾರ**

ಬೆಳಕಿನ ಗುಣವೆ ಕಾಣಿಸುವುದು. ರಂಗಭೂಮಿ ಒಂದು ಕ್ರಿಯಾತ್ಮಕ ಕಲೆಯಾಗಿದ್ದು ಅದರ ಅವಶ್ಯಕತೆಗನುಗುಣವಾಗಿ ಹಲವು ರಂಗಪ್ರಯೋಗಗಳು ವೈವಿಧ್ಯಮಯವಾಗಿ ಬೆಳಕನ್ನು ಬಳಸಿಕೊಂಡು ಕಲಾತ್ಮಕವಾಗಿವೆ. ವೈಜ್ಞಾನಿಕ ಆವಿಷ್ಕಾರಗಳಿಂದಾಗಿ ರಂಗಬೆಳಕಿನ ವ್ಯವಸ್ಥಾಪನೆ ಬಹುದೊಡ್ಡ ಬದಲಾವಣೆಯನ್ನು ಪಡೆದಿದೆ. ಎಣ್ಣೆದೀಪ, ಪೆಟ್ರೋಮ್ಯಾಕ್ಸ್, ವಿದ್ಯುತ್ ನಂತರ ಎಲೆಕ್ಟ್ರಾನಿಕ್ ದೀಪಗಳು ಬಳಕೆಯಾಗುತ್ತಿವೆ. ಇತ್ತೀಚಿನ ದಿನಗಳಲ್ಲಿ ಎಲ್‌ಇಡಿ ದೀಪಗಳು (LED – Light Emitting Diodes) ಒಂದೇ ಉಪಕರಣದಲ್ಲಿ ವಿವಿಧ ಬಣ್ಣಗಳು ಹೊರ ಹೊಮ್ಮುವಂತಹ ದೀಪಗಳು, ಚಿತ್ರ–ವಿಚಿತ್ರ ಪರಿಣಾಮದ ದೀಪಗಳು ಬಂದಿವೆ. ರಂಗತಜ್ಞನಾದವನು ಇಂತಹ ನವನವೀನ ರಂಗ ಬೆಳಕಿನ ತಂತ್ರವನ್ನು ಬಳಸಿ ತನ್ನ ರಂಗ ಪ್ರದರ್ಶನದಲ್ಲಿ ಅನುಸರಿಸುವುದರಿಂದ ಇನ್ನಷ್ಟು ಪರಿಣಾಮಕಾರಿಯಾದ ರಂಗ ಪ್ರದರ್ಶನ ನೀಡಲು

ಸಹಾಯಕವಾಗುತ್ತದೆ. ರಂಗ ಪ್ರದರ್ಶನವನ್ನು ಅತಿಯಾದ ರಂಗ ಬೆಳಕಿನ ವ್ಯವಸ್ಥೆ ಇಲ್ಲದೆಯೂ ಉತ್ತಮವಾದ ನಟರುಗಳ ಅಭಿನಯದ ಮೂಲಕವು ನೀಡಬಹುದು ಎಂಬುದನ್ನು ಮರೆಯಬಾರದು ರಂಗಪ್ರಕಾಶವು ನಾಟಕದ ಭಾವಸ್ಥಿತಿಯನ್ನು ಪ್ರೇಕ್ಷಕನಲ್ಲಿ ಸೃಷ್ಟಿಮಾಡಿ ಒಂದು ಭ್ರಮಾಲೋಕಕ್ಕೆ ಕರೆದುಕೊಂಡು ಹೋಗಲು ಸಹಾಯಕವಾಗುತ್ತದೆ ಎಂಬುದನ್ನು ಮರೆಯಬಾರದು.

**ಪರಾಮರ್ಶನ ಗ್ರಂಥಗಳು**


- ಅಕ್ಷರ ಕೆ.ವಿ (2018). *ರಂಗಪ್ರಪಂಚ.* ಅಕ್ಷರ ಪ್ರಕಾಶನ.
- ಅಕ್ಷರ ಕೆ.ವಿ (2012). *ರಂಗ ಪ್ರಯೋಗ.* ಅಕ್ಷರ ಪ್ರಕಾಶನ.
- ವೆಂಕಟರಾಮ್ ಎನ್.ಎಸ್. (2012). ರಂಗಭೂಮಿ. ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್.